# ಸೋಂಕಿನಿಂದ ಮಗುವಿನ ರಕ್ಷಣೆ

ಗರ್ಭಿಣಿಯರಲ್ಲಿ ಎಚ್‌ಐವಿ ಪಾಸಿಟಿವ್ ಇದ್ದರೆ ಹುಟ್ಟುವ ಮಗುವಿಗೂ ಸಮಸ್ಯೆ ಕಾಡುತ್ತದೆ ಎಂಬ ಆತಂಕ, ಭಯ ಇದ್ದೇ ಇರುತ್ತದೆ. ಆದರೆ ಕೆಲವು ಮುಂಜಾಗ್ರತೆ ಕ್ರಮಗಳಿಂದ ಗರ್ಭಿಣಿಗೆ ಎಚ್‌ಐವಿ ಪಾಸಿಟಿವ್ ಇದ್ದರೂ ಜನಿಸಲಿರುವ ಶೇ.95ಕ್ಕಿಂತ ಹೆಚ್ಚಿನ ಶಿಶುಗಳನ್ನು ಈ ಕಾಯಿಲೆಯಿಂದ ರಕ್ಷಿಸಬಹುದು.

■ ಡಾ.ಎಂ.ಡಿ. ಸೂರ್ಯಕಾಂತ

'ಡಾಕ್ಟ್ರೇ, ನಾನೀಗ ಎಂಟು ತಿಂಗಳ ಗರ್ಭಿಣಿ. ನನಗೂ ನನ್ನ ಪತಿಗೂ ಎಚ್‌ಐವಿ ಪಾಸಿಟಿವ್ ಸೋಂಕು ಇದೆ. ಗರ್ಭಸ್ಥ ಶಿಶುವಿಗೆ ಈ ಸೋಂಕು ಹರಡಬಹುದೇ? ಎದೆಹಾಲು ಕೊಡಬಹುದೇ?'

**

'ನನ್ನ ಮೂರು ವರ್ಷದ ಮಗುವಿಗೆ ಪದೇ ಪದೇ ಜ್ವರ ಬರುತ್ತಿದೆ. ಚೆಕ್ ಅಪ್‌ಗೆ ಹೋದಾಗ ಎಚ್‌ಐವಿ ಪಾಸಿಟಿವ್ ಇದೆ ಎಂದು ಗೊತ್ತಾಯಿತು. ಕಾಯಿಲೆ ವಾಸಿ ಆಗಬಹುದೇ?' ತಾಯಿಯೊಬ್ಬಳ ಆತಂಕ.

**

ರಾಷ್ಟ್ರೀಯ ಏಡ್ಸ್ ನಿಯಂತ್ರಣ ಮೂಲದ ಪ್ರಕಾರ 2011ರಲ್ಲಿ ಭಾರತದಲ್ಲಿ 20 ಲಕ್ಷಕ್ಕಿಂತ ಅಧಿಕ ಎಚ್‌ಐವಿ ರೋಗಿಗಳಿದ್ದು, ಇದರಲ್ಲಿ ಸುಮಾರು ಒಂದು ಲಕ್ಷ ಮಕ್ಕಳಿದ್ದಾರೆ.

ಶೇ.80 ರಷ್ಟು ಮಕ್ಕಳಿಗೆ ಎಚ್‌ಐವಿ ತಾಯಿಯಿಂದ ಬರುತ್ತದೆ. ಇದು ಗರ್ಭದಲ್ಲಿರುವಾಗ, ಹೆರಿಗೆ ಸಮಯದಲ್ಲಿ, ಎದೆ ಹಾಲು ಮೂಲಕ ಶಿಶುವಿಗೆ ಹರಡುತ್ತದೆ. ಇದನ್ನು ತಡೆಯಲು ಯಾವುದೇ ಮಧ್ಯಸ್ಥಿಕೆ ಇಲ್ಲದಿದ್ದರೆ, ಶಿಶುವಿಗೆ ಸೋಂಕಿನ ಅಪಾಯ ಶೇ.20 ರಿಂದ 45. ವಿಶ್ವದಲ್ಲಿ ಪ್ರತಿ ಗಂಟೆಗೆ 50ಕ್ಕಿಂತ ಹೆಚ್ಚು ಮಕ್ಕಳು ಈ ಸೋಂಕಿನಿಂದ ಸಾಯುತ್ತಿವೆ. ಇದಕ್ಕೆ ಪರಿಣಾಮಕಾರಿ ಚಿಕಿತ್ಸೆ ಇಲ್ಲದ್ದರಿಂದ ಮುಂಜಾಗ್ರತೆ ಕ್ರಮಗಳಿಂದ ರೋಗ ತಡೆಯಲು ಸಾಧ್ಯ.



**ಗರ್ಭಾವಧಿಯಲ್ಲಿ..**

ರಕ್ತ ಪರೀಕ್ಷೆಯಿಂದ ಎಚ್‌ಐವಿ ಖಚಿತಗೊಂಡ ಗರ್ಭಿಣಿ, ಎಚ್‌ಐವಿ ನಿರೋಧಕ ಔಷಧಿ (ಎ.ಆರ್.ಟಿ)ಯನ್ನು ಕೂಡಲೇ ಪಡೆಯಬೇಕು ಮತ್ತು ಇದನ್ನು ಜೀವನ ಪರ್ಯಂತ ಮುಂದುವರೆಸಬೇಕು. ಇವು ಉಚಿತವಾಗಿ ಎ.ಆರ್.ಟಿ ಕೇಂದ್ರಗಳಲ್ಲಿ ಲಭ್ಯ. ಗರ್ಭಿಣಿ ಈ ಕೇಂದ್ರಕ್ಕೆ ಬರಲು ಸಾಧ್ಯವಾಗದಿದ್ದರೆ ತನ್ನ ನಂಬಿಗಸ್ಥ ವ್ಯಕ್ತಿ ಮೂಲಕ ತರಿಸಿಕೊಳ್ಳಬಹುದು.

**ಜನಿಸಿದ ಶಿಶುವಿಗೆ**

ಗರ್ಭಿಣಿಗೆ ಸೋಂಕು ಇದ್ದರೆ, ಇದು ಜನಿಸಿದ ಶಿಶುವಿಗೆ ಹರಡದಂತೆ ತಡೆಯಲು ಶಿಶುವಿಗೆ ನೆವಿರೆಪಿನ್ ಔಷಧಿ ಕೊಡಿಸಬೇಕು. ಇದನ್ನು ಹುಟ್ಟಿದ ಒಂದು ಗಂಟೆಯೊಳಗೆ ಆರಂಭಿಸಿ ದಿನನಿತ್ಯ ಕನಿಷ್ಠ 6 ವಾರ ಮುಂದುವರೆಸಬೇಕು.

**ತಾಯಿ ಹಾಲು**

ಎಳೆ ಶಿಶುವಿಗೆ ಎದೆ ಹಾಲು ಸರ್ವಶ್ರೇಷ್ಠ ಆಹಾರ. ಎಚ್‌ಐವಿ ಸೋಂಕಿರುವ ಬಾಣಂತಿ ಮೊದಲ 6 ತಿಂಗಳವರೆಗೆ ಕೇವಲ ಎದೆ ಹಾಲನ್ನು ಉಣಿಸಬೇಕು. ಇದಾದ ನಂತರ ಪೂರಕ ಆಹಾರದ ಜೊತೆ ಎರಡು ವರ್ಷ ಎದೆಹಾಲನ್ನು ಮುಂದುವರೆಸಬೇಕು. ಕೆಲವು ಅಪರೂಪದ ಪ್ರಸಂಗದಲ್ಲಿ(ಎದೆ ಕೂಡಿಸಲು ನಿರಾಕರಣೆ, ಬಾಣಂತಿಗೆ ಗಂಭೀರ ಕಾಯಿಲೆ, ಸಾವು) ಪರ್ಯಾಯ ಹಾಲನ್ನು ನೀಡಬೇಕು. ಇಲ್ಲಿ ಮುಂಜಾಗ್ರತೆ ಅವಶ್ಯ. ಪರ್ಯಾಯ ಹಾಲು ಪೌಷ್ಟಿಕ ಮತ್ತು ಶುಚಿತ್ವವಾಗಿರಬೇಕು. ಗುಣಮಟ್ಟ ಇಲ್ಲದ ಪರ್ಯಾಯ ಹಾಲಿನಿಂದ ಅಪೌಷ್ಟಿಕತೆ ಸಾಧ್ಯ. ಪರ್ಯಾಯ ಹಾಲು ಬಳಸುವಾಗ ಅಶುಚಿತ್ವದ ಸಂಭವ ಹೆಚ್ಚು. ಇದು ವಾಂತಿ ಬೇಧಿಗೆ ಕಾರಣವಾಗಿ ಇವುಗಳಿಂದಾಗಿ ಶೇ.15 ಕ್ಕಿಂತ ಅಧಿಕ ಶಿಶುಗಳು ಸಾಯುವ ಅಪಾಯವಿದೆ. ಯಾವುದೇ ಕಾರಣಕ್ಕೂ ಮೊದಲ ಆರು ತಿಂಗಳಲ್ಲಿ ಎದೆ ಹಾಲಿನ ಜೊತೆ ಯಾವುದೇ ಪರ್ಯಾಯ ಆಹಾರ (ಆಕಳ ಹಾಲು, ಪೌಡರ್ ಅಥವಾ ಪ್ಯಾಕೆಟ್ ಹಾಲು, ನೀರು, ಹಣ್ಣಿನ ರಸ) ಕೊಡಬೇಡಿ. ಇದರಿಂದ ಎಚ್‌ಐವಿ ಸೋಂಕಿನ ಅಪಾಯ ಹೆಚ್ಚುತ್ತದೆ.

**ರಕ್ತ ಪರೀಕ್ಷೆ**

ತಾಯಿಯ ಸೋಂಕು ಮಗುವಿಗೆ ತಗುಲಿರುವುದನ್ನು ಗುರುತಿಸಲು ಮಗುವಿಗೆ ಒಂದೂವರೆ ತಿಂಗಳಿದ್ದಾಗ ಡಿ.ಎಸ್.ಎ/ಪಿಸಿರ್ (ಡ್ರೈ ಬ್ಲಡ್ ಟೆಸ್ಟ್) ಹಾಗೂ 18 ತಿಂಗಳಿದ್ದಾಗ ರಕ್ತ ಪರೀಕ್ಷೆ ಅವಶ್ಯ. ಈ ತಪಾಸಣೆಗಳಲ್ಲಿ ಸೋಂಕು ಕಂಡು ಬಂದರೆ ಕೂಡಲೇ ವೈದ್ಯ ಸಲಹೆ ಅತ್ಯವಶ್ಯ. ಮಗುವಿಗೆ ಎಚ್‌ಐವಿ ಖಚಿತವಾದರೆ ಎಚ್‌ಐವಿ ರೋಗ ನಿರೋಧಕ ಔಷಧಿ (ಎ.ಆರ್.ಟಿ)ಯನ್ನು ಕನಿಷ್ಠ 2 ವರ್ಷ ಕೊಡಿಸಬೇಕು.

**ಶಿಶು ತಪಾಸಣೆ**

ಎಚ್.ಐ.ವಿ ಸೋಂಕಿತ ಮಹಿಳೆಗೆ ಜನಿಸಿದ ಶಿಶುವನ್ನು ತಜ್ಞ ವೈದ್ಯರಿಂದ ನಿಗದಿತ ಸಮಯಕ್ಕೆ ಆಗಾಗ ಪರೀಕ್ಷಿಸಬೇಕು. ಹುಟ್ಟಿದ ದಿನ ಶಿಶುವಿನ ತಪಾಸಣೆ ಅತ್ಯವಶ್ಯಕ. ಮೊದಲ ವರ್ಷದಲ್ಲಿ ಪ್ರತಿ ತಿಂಗಳು, ನಂತರ ಪ್ರತಿ ಮೂರು ತಿಂಗಳಿಗೊಮ್ಮೆ ವೈದ್ಯರನ್ನು ಸಂಪರ್ಕಿಸಬೇಕು. ಈ ಭೇಟಿಯಲ್ಲಿ ರೋಗ ನಿರೋಧಕ ಲಸಿಕೆ, ಎದೆ ಹಾಲು, ಪರ್ಯಾಯ ಹಾಲಿನ ಬಗ್ಗೆ ಆಪ್ತ ಸಲಹೆ ನೀಡಲಾಗುತ್ತದೆ. ಈ ಅವಧಿಯಲ್ಲಿ ಆರಂಭಿಕ ಲಕ್ಷಣಗಳ ಬಗ್ಗೆ ಪರೀಕ್ಷಿಸಿ ಚಿಕಿತ್ಸೆ ನೀಡಲಾಗುತ್ತದೆ.

**ರೋಗ ನಿರೋಧಕ ಲಸಿಕೆ**

ಎರಡು ವರ್ಷದೊಳಗಿನ ಎಲ್ಲ ಮಕ್ಕಳಿಗೆ 6 ಮಾರಕ ರೋಗದ ಲಸಿಕೆಗಳನ್ನು (ಪೋಲಿಯೊ, ಡಿ.ಪಿ.ಟಿ, ಬಿ.ಸಿಜಿ, ದಡಾರ, ಬಿಕಾಮಾಲೆ) ಕೊಡಿಸಲು ಮರೆಯಬೇಡಿ. ಏಕೆಂದರೆ ಎಚ್.ಐ.ವಿ ಸೋಂಕು ಇರುವಾಗ ಈ ಮಾರಕ ರೋಗಗಳ ಅಪಾಯ ಹೆಚ್ಚು.

## ಮಗುವಿನಲ್ಲಿ ಸೋಂಕಿನ ಲಕ್ಷಣ- ಚಿಕಿತ್ಸೆ

ಮಗು ಚೆನ್ನಾಗಿ ಊಟ ಮಾಡಿದರೂ ತೂಕದಲ್ಲಿ ಇಳಿತ, ಚಿಕಿತ್ಸೆ ನೀಡಿದರೂ ವಾಸಿ ಆಗದ ಭೇದಿ ಮತ್ತು ಚರ್ಮರೋಗ, ಬಾಯಿಯಲ್ಲಿ ಪದೇ ಪದೇ ಹುಣ್ಣು, ಬಗಲು ಕುತ್ತಿಗೆಯಲ್ಲಿ ಗಂಟು, ಕಿವಿ ಮುಂದೆ ಬಾವು ಇವು ಮಕ್ಕಳ ಕಾಯಿಲೆಯ ಆರಂಭಿಕ ಲಕ್ಷಣಗಳು. ಈ ಲಕ್ಷಣಗಳು ಕಂಡು ಬಂದರೆ ಹತ್ತಿರದ ಚಿಕಿತ್ಸಾ ಕೇಂದ್ರಕ್ಕೆ ಭೇಟಿ ನೀಡಿ.

(ಲೇಖಕರು ಬೆಂಗಳೂರಿನಲ್ಲಿ ಮಕ್ಕಳ ತಜ್ಞರು. ಸಂಪರ್ಕ: :9448579390)